# ಕರಿಯ ಚರ್ಮ

ಕರಿಯನ ಕಣ್ಣುಗಳು ಅವನ ಕಪ್ಪುಮುಖದಲ್ಲಿ ಸರಿರಾತ್ರಿಯ ಮಿಂಚಿನಂತೆ ಪ್ರಜ್ವಲಿಸುತ್ತವೆ. ಅವನ ಹಲ್ಲುಗಳು ಅವನ ಸುತ್ತಲ ವಾತಾವರಣದಲ್ಲಿ ಹಾಲಿನಂತೆ ಬೆಳಗುತ್ತವೆ. ಈ ಪ್ರಜ್ವಲತೆ ಮತ್ತು ಹೊಳಪುಗಳನ್ನು ಬಿಳಿಯರ ಮುಖದಲ್ಲಿ ನಾವು ಕಾಣಲು ಸಾಧ್ಯವಿಲ್ಲ. ಬಿಳಿಯರ ಬಿಳುಪಿನ ಮುಖದಲ್ಲಿ ಅವರ ಕಣ್ಣಿನ ಬಿಳಿಯ ಬಣ್ಣ ಮುಚ್ಚಿ ಹೋಗುತ್ತದೆ. ಅವರ ಹಲ್ಲುಗಳು ರಂಗೋಲೆಯ ಬಣ್ಣ ತಳೆದು ಮಂಕು ಪಡೆಯುತ್ತವೆ. ಕರಿಯನ ಹಲ್ಲು ಮತ್ತು ಕಣ್ಣುಗಳು ರಾತ್ರಿ ಸಮಯದ ನೀಲಾಕಾಶದ ನಕ್ಷತ್ರ ಗ್ರಹಗಳಂತೆ ಎದ್ದು ಕಾಣುತ್ತವೆ. ಅವು ಆಕಾಶಕ್ಕೆ ಜೀವ ತುಂಬುವಂತೆ ಕರಿಯನ ವ್ಯಕ್ತಿತ್ವಕ್ಕೆ ಅವನ ಬಿಳಿಯ ಕಣ್ಣುಗಳು ಮತ್ತು ಹಲ್ಲುಗಳು ವಿಶೇಷ ಮೆರಗನ್ನೂ ಭಾವಾರ್ಥವನ್ನು ತುಂಬುತ್ತವೆ. ಈ ಬಗೆಯ ಅರ್ಥಮುಖತೆ ಬಿಳಿಯನಿಗೆ ದಕ್ಕಲಾರವು!

ಆದರೆ ಮಾನವ ಚರಿತ್ರೆ ಸದಾ ಕರಿಯನ ಬಣ್ಣವನ್ನು ಕೀಳೆಂದು ಭಾವಿಸಿ, ವ್ಯಾಖ್ಯಾನಿಸಿ ಅವನ ವ್ಯಕ್ತಿತ್ವಕ್ಕೆ ಮತ್ತು ಅಸ್ತಿತ್ವಕ್ಕೆ ಅನ್ಯಾಯ ಮಾಡಿದೆ. ಈ ಜಗತ್ತಿನ ಮೊದಲ ಮಾನವ ಯಾವ ಬಣ್ಣದವನಾಗಿದ್ದ? ಅವನ ರೂಪ ವಿಶೇಷಗಳು ಇವತ್ತಿನ ಯಾರನ್ನು ಹೋಲುತ್ತಿದ್ದವು? ಮಾನವ ಶಾಸ್ತ್ರಜ್ಞರು ಅತ್ಯಂತ ಪುರಾತನ ಮಾನವರಾದ ಜಾವಾಮಾನವ ಅಥವಾ ನಿಯಾಂದರ್‌ತಲ್ ಮಾನವರ ಅವಶೇಷಗಳನ್ನು ಅಧ್ಯಯನ ಮಾಡಿ ಶೋಧಿಸಿರುವ ಸತ್ಯ– ಆದಿಮಾನವನ ಬಣ್ಣ ಕರಿಯದಾಗಿತ್ತು ಅಥವಾ ಕಡು ತಾಮ್ರವರ್ಣದಾಗಿತ್ತು. ಅಂದರೆ ಈ ಭುವಿಯ ಮೊದಲ ಮಾನವ ಹಕ್ಕುದಾರ ಕರಿಯನೇ ಆಗಿದ್ದನೆಂಬುದು ಅರಿವಿಗೆ ಬರುತ್ತದೆ. ಆದರೆ ಅನಂತರ ಬೆಳೆದ ಸಂಸ್ಕೃತಿ–ನಾಗರಿಕತೆಗಳು ಕರಿಯನನ್ನು ಅಂತಿಮ ದರ್ಜೆಯ ಮನುಷ್ಯನೆಂದು ಕರೆದು ವರ್ಣಭೇದ ನೀತಿಯನ್ನು ಅನುಸರಿಸುತ್ತಾ ಬಂದಿವೆ. ಅವನು ಗುಲಾಮನಾಗುವುದಕ್ಕೆ ಮಾತ್ರ ಜನಿಸಿದ್ದಾನೆ; ಅವನು ದುಡಿಯುವ ದಾಸ; ಅವನು ಅಸ್ಪೃಶ್ಯ; ಅವನು ದನ ಕುರಿ ಮೇಕೆಗಳಂಥ ಒಂದು ಪ್ರಾಣಿ ಸಮಾನ. (ಅಥವಾ ಅದಕ್ಕಿಂತಲೂ ಕೀಳು! ಏಕೆಂದರೆ ಈ ಪ್ರಾಣಿಗಳನ್ನು ಮನುಷ್ಯ ಸ್ಪರ್ಶಿಸುತ್ತಾನೆ; ಒಮ್ಮೊಮ್ಮೆ ಪ್ರೀತಿಯಿಂದ ಮೈದಡವುತ್ತಾನೆ!) ಪ್ರಾಚೀನ ಗ್ರೀಕರು ಇವರನ್ನು ಪ್ರಾಣಿಗಳೆಂದೇ ಭಾವಿಸಿದ್ದರು. ಅವರಿಗೆ ಬಿಳಿಯರಿಗಿರುವಂಥ ರಾಗಭಾವಗಳು ಇರಲು ಸಾಧ್ಯವಿಲ್ಲವೆಂದೇ ನಂಬಿದ್ದರು!

ನಮ್ಮ ತತ್ವಶಾಸ್ತ್ರ– ಮೀಮಾಂಸೆಗಳು ಕೂಡ ಕರಿಯ ಬಣ್ಣವನ್ನು ತುಚ್ಛವಾಗಿ ಕಂಡಿವೆ! ಅಜ್ಞಾನವೆಂಬುದು ಕಪ್ಪುವರ್ಣದ್ದೆಂದೂ ಜ್ಞಾನವೆಂಬುದು ಬಿಳಿಯವರ್ಣ ಸ್ವರೂಪಿಯೆಂದೂ ಅವು ವ್ಯಾಖ್ಯಾನಿಸಿವೆ! ಜ್ಞಾನವನ್ನು ಬೆಳಕೆಂದೂ ಜ್ಯೋತಿಯೆಂದೂ ಕರೆಯಲಾಗಿದೆ. ಈ ಬಗೆಯ ವ್ಯಾಖ್ಯಾನಕ್ಕೆ ಕಾರಣ (ರೀಸನ್) ಅಥವಾ ಆಧಾರವನ್ನು ಅವು ನೀಡಲು ಅಸಮರ್ಥವಾಗಿವೆ ಅಥವಾ ಕೇವಲ ಕತ್ತಲೆ ಬೆಳಕಿನ ಪ್ರಕೃತಿಯಾಟವನ್ನು ಅನ್ವಯಿಸಿ ಮಾತನಾಡಿವೆ. ಕತ್ತಲು ನಿಗೂಢತೆಯ ಸಂಕೇತವಾದರೆ ಬೆಳಕು ದೃಶ್ಯ ಸ್ವರೂಪಕ್ಕೆ ರೂಪಕವಾಗುತ್ತದೆ. ಆದರೆ ಈ ಅನುಭವ ದೃಗ್ಗೋಚರವಷ್ಟೇ, ಸತ್ಯವಲ್ಲವೆಂಬ ಅರಿವು ನಮ್ಮ ತತ್ವ ಮೀಮಾಂಸಕಾರರಿಗೆ ತೋರದೆ 'ಕಪ್ಪುಬಿಳುಪು' ಸಿದ್ಧಾಂತವನ್ನು ಮಂಡಿಸಿಬಿಟ್ಟರು. 'ಬೆಳ್ಳಗಿರುವುದೆಲ್ಲಾ ಹಾಲು' ಎಂಬ ಹುಸಿ ಸತ್ಯವನ್ನು– ವಾಸ್ತವ ಸತ್ಯವೆಂದು ಚರಿತ್ರೆಯುದ್ದಕ್ಕೂ ಮಂಡಿಸುತ್ತಾ ಬಂದರು.

ಇದರಿಂದ ಆದ ಪರಿಣಾಮವೇನು? ಜಗತ್ತಿನ ಕಪ್ಪುವರ್ಣಕ್ಕೆ ಚರಿತ್ರೆಯುದ್ದಕ್ಕೂ 'ನೀನು ಕೀಳು.. ನೀನು ಕೀಳು..' ಎಂದು ಕರೆ ಕರೆದು– ಬರೆ ಬರೆದು ಕೀಳರಿಮೆಯನ್ನು ಉಂಟು ಮಾಡಿದ್ದು. ಅಕ್ಷರ ಸಂಸ್ಕೃತಿಯಿಂದ ಅವರನ್ನು ದೂರವಿಟ್ಟು, ಕೇವಲ ಶ್ರಮದ ಆಳುಗಳನ್ನಾಗಿ ಪರಿವರ್ತಿಸಿ 'ನಾವಿರುವುದೇ ಹೀಗೆ', 'ನಾವು ಹುಟ್ಟಿರುವುದೇ ದಾಸರಾಗುವುದಕ್ಕೆ' ಎಂಬ ಅರಿವು ಅವರ ರಕ್ತದಲ್ಲಿ, ವಂಶವಾಹಿಗಳಲ್ಲಿ ಆವರ್ಭವಿಸುವಂತೆ ಮಾಡಿದ್ದು. ಇದು ಧಾರ್ಮಿಕ ರಾಜಕಾರಣ ಮಾಡಿರುವ ಹುನ್ನಾರ, ಮೋಸ; ಮಾನವತೆಯ ಮೇಲೆ ನಡೆಸಿರುವ ಕ್ರೌರ್ಯ. ಬಣ್ಣ ನೀತಿ ಮತ್ತು ಮತಧರ್ಮಗಳು ನಿರಂತರವಾಗಿ ದುಡಿಮೆಯ ಜನಾಂಗವೊಂದನ್ನು ಜತನವಾಗಿ ಇರುವಂತೆ ನಿರ್ವಹಿಸಿದ ತಂತ್ರಗಾರಿಕೆ ಇದು. ಈ ಸತ್ಯ ಇಂದಿನ ಜಗತ್ತಿಗೆ ನಿಧಾನವಾಗಿ ಅರಿವಿಗೆ ಬರುತ್ತಿದೆ.

ಈ ಸತ್ಯದ ಜಾಗೃತಿಯ ಫಲವಾಗಿ 'ಕಪ್ಪು ಸುಂದರ'ಎಂಬ ಸ್ವಾಭಿಮಾನದ ಅಲೆಯೊಂದು ಎಲ್ಲೆಡೆ ಹರಡುತ್ತಿದೆ. ಬೌದ್ಧಿಕತೆಯೆಂಬುದು ಯಾವುದೇ ವರ್ಣವೊಂದರ ಸ್ವತ್ತಲ್ಲ. ಅದು ಮೈಮನ ಬುದ್ಧಿಯಿರುವ ಯಾವ ವರ್ಣದವರೂ ದಕ್ಕಿಸಿಕೊಳ್ಳಬಹುದಾದ ಶ್ರಮದ ಫಲವೆಂಬ ಸತ್ಯ ಕೈಸೇರುತ್ತಿದೆ, ಎಲ್ಲರ ನೆತ್ತಿಗೇರುತ್ತಿದೆ.

ಒಂದು ಸತ್ಯ ಗೊತ್ತೆ? ಎಂಥ ಬಿಸಿಲು ಗಾಳಿ ಪ್ರಕೃತಿ ವೈಪರೀತ್ಯಗಳಿಗೂ ಕರಿಯ ಚರ್ಮ ಅಲುಗಾಡುವುದಿಲ್ಲ, ವರ್ಣಗೆಡುವುದಿಲ್ಲ. ಮತ್ತಷ್ಟು ಕಡುವಾಗುತ್ತದೆ, ಗಟ್ಟಿಯಾಗುತ್ತದೆ. ಆದರೆ ಬಿಳಿಯ ಬಣ್ಣ? ಅದನ್ನು ಬಿಡಿಸಿ ಹೇಳಬೇಕಾದ ಅವಶ್ಯಕತೆಯಿಲ್ಲ!

■ ಶಿಕಾಕು

## ಮಾತೇ ಮುತ್ತು

★ ಮೂರ್ಖನು ತನ್ನನ್ನು ತಾನೇ ಹೊಗಳಿಕೊಳ್ಳದಿದ್ದರೆ ಅವನನ್ನು ಹೊಗಳತಕ್ಕವರು ಜಗತ್ತಿನಲ್ಲಿ ಯಾರು ಸಿಗುತ್ತಾರೆ! ಅವನಿಗೆ ಸುಖ ಯಾವಾಗ ದೊರಕೀತು!

-ಕಲಿ ವಿಡಂಬನ

★ ಫಲವತ್ತಾದ ನೆಲದಲ್ಲಿ ಬೀಜವನ್ನು ಬಿತ್ತಬೇಕು. ಗುಣಶಾಲಿಯಾದ ಮಗನಿಗೆ ಹಣವನ್ನು ಕೊಡಬೇಕು. ಒಳ್ಳೆಯ ನೆಲದಲ್ಲಿ ಹಾಗೂ ಒಳ್ಳೆಯ ಮಗನಲ್ಲಿ ಇಟ್ಟದ್ದು, ಕೊಟ್ಟದ್ದು ಎಂದಿಗೂ ಹಾಳಾಗುವುದಿಲ್ಲ.

-ಪರಾಶರ ಸ್ಮೃತಿ

★ ಸ್ತ್ರೀಗೆ ಎಲ್ಲ ತರಹದ ಸ್ವಾತಂತ್ರ್ಯ, ಗೌರವ, ಸಮಾನತೆ ತಂದುಕೊಡಲು ಸಾಮಾಜಿಕ ಕ್ರಾಂತಿಯಾಗಬೇಕಾಗಿದೆ.

-ಕೆ.ಆರ್.ನಾರಾಯಣನ್

★ ರಾಜಕೀಯವನ್ನೂ, ನೀತಿಯನ್ನೂ ಬೇರೆ ಬೇರೆ ಎಂದು ಎಣಿಸಿದವರು– ಎರಡನ್ನೂ ತಿಳಿದುಕೊಳ್ಳಲಾರರು.

-ಜೆ.ವಿ.ಮಾರ್ಲೆ

★ ಜೀವನವೆಲ್ಲಾ ಬೇವು ಬೆಲ್ಲ, ಎರಡೂ ಸವಿದವನೆ ಕವಿ ಮಲ್ಲ!

-ಕುವೆಂಪು

★ ಯುದ್ಧದ ಚರಿತ್ರೆಯನ್ನು ಎಲ್ಲರೂ ಆಸಕ್ತಿಯಿಂದ ಓದುತ್ತಾರೆ; ಶಾಂತಿಯ ಚರಿತ್ರೆಯಲ್ಲಿ ಆಸಕ್ತಿ ಕಡಿಮೆ.

-ಥಾಮಸ್ ಹಾರ್ಡಿ

★ ಪ್ರಯತ್ನಿಸುವವರೆಗೂ ಯಾರಿಗೂ ಏನು ಮಾಡಬಲ್ಲೆ ಎಂಬುದು ತಿಳಿಯದು.

-ಪಬ್ಲಿಯಸ್ ಸೈರಸ್

★ ನಮ್ಮನ್ನು ಹುಡುಕಿಕೊಂಡು ಜನ ನಮ್ಮ ಬಳಿ ಬಂದಾಗ ಅವರ ವಿಚಾರ ನಮಗೆ ತಿಳಿಯುವುದಿಲ್ಲ. ಅವರನ್ನು ಅರ್ಥ ಮಾಡಿಕೊಂಡು ತಿಳಿಯಬೇಕಾದರೆ, ನಾವೇ ಅವರ ಬಳಿ ಹೋಗಬೇಕು.

-ವಾಂಗ್ ಗಯಟೆ

★ ನಾಚಿಕೆ ಅಥವಾ ಭಯ ಇಲ್ಲದೆ, ಮನುಷ್ಯನ ಅಂತರಂಗದಲ್ಲಿ ಕೆಟ್ಟ, ಒಳ್ಳೆಯ, ಸಂತೋಷದ ಹಾಗೂ ದುಃಖದ ಎಲ್ಲ ರೀತಿಯ ಯೋಚನೆಗಳು ಬರುತ್ತವೆ.

-ಥಾಮಸ್ ಹಾಬ್ಸ್

★ ಹೊಟ್ಟೆಗೆ ಹಿಟ್ಟು ಕಾಣಿಸುವ ಜನರು ದುಡಿಯೋ ರೈತರು. ಅವರಿಗೆ ತಿಳಿವಳಿಕೆ ಕೊಡಬೇಕು. ಅವರಿಗೆ ಸಾಲಸೋಲಗಳು ಇಲ್ಲದಂತೆ ನೋಡಿಕೊಳ್ಳಬೇಕು.

-ಎಂ.ಆರ್.ಶ್ರೀನಿವಾಸಮೂರ್ತಿ

★ ನಾನು ಬೇರೆ, ದೇಹ ಬೇರೆ ಎಂಬ ತಿಳಿವು ತಂದುಕೊಂಡರೆ ರೋಗದ ಬಾಧೆ ಅತ್ಯಲ್ಪವಾಗುತ್ತದೆ.

- ಎಂ.ವಿ.ಸೀತಾರಾಮಯ್ಯ

★ ಗೋ ಧನ, ಕುದುರೆ ಧನ, ಆನೆ ಧನ, ರಾಜ್ಯ, ಸಂಪತ್ತು ಇದೆಲ್ಲವೂ 'ಸಂತೋಷ ಧನ'ದ ಮುಂದೆ ಧೂಳಿಗೆ ಸಮಾನ.

-ಕಬೀರ